ಶ್ರೀ ವೀರಯ್ಯ ಸ್ವಾಮಿ.— ೧೯ ಪೂರಕ ಘಟಕಗಳು ಇವೆ ಎಂದು ತಮ್ಮ ಉತ್ತರದಲ್ಲಿ ತಿಳಿಸಿದ್ದೀರಿ ಇನ್ನು ಮುಂದೆ ಹೊಸ ಘಟಕಗಳಿಗೆ ಲೈಸನ್ಸ್ ಅಥವಾ ಹೊಸ ಘಟಕಗಳಲ್ಲಿ ಸ್ಥಾಪಿಸಲಿಕ್ಕೆ ಸರಕಾರದಿಂದ ಪರ್ಮಿಷನ್ ಏನಾದರೂ ಕೊಡುತ್ತೀರಾ ? ಈಗಿರುವ ಪೂರಕ ಘಟಕಗಳಲ್ಲಿ ಇಲ್ಲವೇ ಮುಂಬರುವ ಅಂದರೆ ಹೊಸದಾಗಿ ಸ್ಥಾಪಿಸಲ್ಪಡುವ ಘಟಕಗಳಲ್ಲಿ ಈಗಿನ ಅಥವಾ ಹಿಂದಿನ ಜನತಾ ಪಕ್ಷದ ಮಂತ್ರಿಗಳ ಸಂಬಂಧಿಕರು ಯಾರಾದರು ಇದ್ದಾರೆಯೇ ? ಇದ್ದರೆ ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ನನ್ನ ಗಮನಕ್ಕೆ ಬಂದ ಹಾಗೆ ಮಂತ್ರಿಗಳ ಸಂಬಂಧಿಕರು ಇಲ್ಲ. ಅದು ನನಗೆ ಗೊತ್ತಿಲ್ಲ. ತಮಗೇನಾದರೂ ಗೊತ್ತಿದ್ದರೆ ತಿಳಿಸಿ. ಆಕ್ಸಿಲರೀ ಘಟಕಗಳನ್ನು ಯಾರು ಬೇಕಾದರೂ ಸ್ಥಾಪನೆ ಮಾಡಬಹುದು. ಅವರು ಸಪ್ಲೈ ಮಾಡುವ ಸರಕುಗಳ ಗುಣಮಟ್ಟ ಒಳ್ಳೆಯದಾಗಿರಬೇಕು, ಹೆಚ್ಚಿನ ಆಕ್ಸಿಲರೀ ಘಟಕಗಳನ್ನು ಸ್ಥಾಪನೆ ಮಾಡುವ ಯೋಚನೆ ಇಲ್ಲ.

ವಿ. ಐ. ಎಸ್. ಎಲ್. ಕಾರ್ಖಾನೆ ಬಗ್ಗೆ.

೪೦೫೨ ಶ್ರೀ ಬಿ. ಸ್ವಾಮಿರಾವ್ (ಹೊಸನಗರ).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಇಲಾಖೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಶ್ವೇಶ್ವರಯ್ಯ ಉಕ್ಕಿನ ವಿ. ಐ. ಎಸ್. ಎಲ್, ಕಾರ್ಖಾನೆ ಒಂದು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳ ವಿದ್ಯುಚ್ಛಕ್ತಿ ಬಾಕಿ ಉಳಿಸಿಕೊಂಡಿರುವುದು ನಿಜವೇ ?

ಆ) ವಿ. ಐ. ಎಸ್. ಎಲ್. ಯನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿರುವುದು ನಿಜವೇ?

ಇ) ವಿ. ಐ. ಎಸ್. ಎಲ್. ನ ಕಳೆದ ಮೂರು ವರ್ಷಗಳಲ್ಲಿನ ನಷ್ಟವೆಷ್ಟು ?

ಶ್ರೀ ಜೆ. ಹೆಚ್. ಪಟೇಲ್, (ಭಾರಿ ಮತ್ತು ಮಧ್ಯಮ ಕೈಗಾರಿಕೆಗಳ ಮತ್ತು ವಿದ್ಯುತ್ ಇಲಾಖೆ ಸಚಿವರು).—

ಅ) ವಿಶ್ವೇಶ್ವರಯ್ಯ ಉಕ್ಕಿನ ಕಾರ್ಖಾನೆ ವಿದ್ಯುಚ್ಛಕ್ತಿ ಮಂಡಳಿಗೆ ೭೧.೨೧ ಕೋಟಿ. ರೂ. ಗಳನ್ನು ವಿದ್ಯುಚ್ಛಕ್ತಿ ಬಾಕಿ ಕೊಡಬೇಕಾಗಿದೆ.

ಆ) ನಿಜವಲ್ಲ.

ಇ) ಮೂರು ವರ್ಷಗಳಲ್ಲಿ ಕೆಳಗೆ ಕಾಣಿಸಿದಂತೆ ನಷ್ಟ ಉಂಟಾಗಿದೆ.

	೧೯೮೫-೮೬	೧೯೮೬-೮೭	೧೯೮೭-೮೮
ಆಪಮೌತಾಲ್ಯಪನ ಮತ್ತು ಬಡ್ಡಿಗೆ ಮೊದಲು	೧೫೦೪.೨೦	೮೦೩.೯೫	೫೧೮.೩೦(ಲಕ್ಷ ರೂ. ಗಳಲ್ಲಿ)
ಆಪಮೌತಾಲ್ಯನ ಮತ್ತು ಬಡ್ಡಿ ಮೊತ್ತದ ನಂತರ ಒಟ್ಟು	೩೨೪೦.೭೯	೨೬೧೯.೬೫	೨೪೪೦.೪೮ (ಲಕ್ಷ ರೂ ಗಳಲ್ಲಿ)

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ, ಸುಮಾರು ೭೧ ಕೋಟಿ ರೂಪಾಯಿ ವಿದ್ಯುತ್ ಬಿಲ್ ಬಾಕಿ ಇದೆ ಎಂದು ಹೇಳಿದ್ದಾರೆ. ಅದರ ಬಗ್ಗೆ ತಾವು ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಈಗಾಗಲೇ ರಾಜ್ಯದಲ್ಲಿ ಬಡವರಿಗೆ ಕೊಟ್ಟಿರತಕ್ಕಂಥ ಜನತಾ ಮನೆಯವರ ವಿದ್ಯುತ್ ಬಿಲ್ ಬಾಕಿ ಇದೆ ಎಂದು ಸುಮಾರು ೫೦-೬೦ ರೂಪಾಯಿ ಬಿಲ್ ಬಾಕಿ ಇದ್ದರೆ ಅಂಥ ಮನೆ ವಿದ್ಯುಚ್ಛಕ್ತಿಯನ್ನು ಡಿಸ್-ಕನೆಕ್ಟ್ ಮಾಡಿದ್ದೀರಿ. ಈ ರೀತಿ ೭೧ ಕೋಟಿ ರೂಪಾಯಿ ಬಾಕಿ ಇದ್ದರೂ ಸಹಾ ಇದನ್ನು ಏತಕ್ಕೆ ಡಿಸ್-ಕನೆಕ್ಟ್ ಮಾಡಿಲ್ಲ ? ಅವರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ ಮತ್ತೆ ಇದನ್ನು ಖಾಸಗಿಯವರಿಗೆ ಮಾರಾಟ ಮಾಡುವುದಕ್ಕೆ ನಾವು ಒಪ್ಪಿಲ್ಲ, ಅದು ನಿಜವಲ್ಲ ಎಂದು ಹೇಳಿದ್ದೀರಿ. ಇದರ ಬಗ್ಗೆ ಕೇಂದ್ರ ಸರ್ಕಾರದ ಜೊತೆಗೆ ಕೇಂದ್ರ ಸರ್ಕಾರಕ್ಕೆ ಕೊಡುವುದರ ಬಗ್ಗೆ ಏನಾದರೂ ಯೋಚನೆಯನ್ನು ಮಾಡಿದ್ದೀರಾ ಎಂದು ಕೇಳುತ್ತೇನೆ ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಇದು ನಮ್ಮ ಸರ್ಕಾರಿ ವಲಯದಲ್ಲಿರತಕ್ಕಂಥ ಕಾರ್ಖಾನೆ ಆಗಿರುವುದರಿಂದ ಇದರ ವಿದ್ಯುತ್ ಡಿಸ್-ಕನೆಕ್ಟ್ ಮಾಡಿಲ್ಲ. ಇಲ್ಲದಿದ್ದರೆ ಇದನ್ನು ಇಷ್ಟು ಹೊತ್ತಿಗೆ ಡಿಸ್-ಕನೆಕ್ಟ್ ಮಾಡುತ್ತಿದ್ದೆವು. ಏತಕ್ಕೆ ಡಿಸ್-ಕನೆಕ್ಟ್ ಮಾಡಿಲ್ಲ ಎಂದಂ ಮಾನ್ಯ ಸದಸ್ಯರಿಗೆ ಗೊತ್ತಿದೆ. ಡಿಸ್-ಕನೆಕ್ಟ್ ಮಾಡಿದರೆ ಏನಾಗುತ್ತದೆ ಎಂದು ಅವರಿಗೂ ಕೂಡಾ ಗೊತ್ತಿದೆ. ವಿ. ಐ. ಎಸ್. ಎಲ್. ಪವರ್ ಡಿಸ್-ಕನೆಕ್ಟ್ ಮಾಡಿದರೆ ಏನಾಗುತ್ತದೆ ಎಂದಂ ಸ್ವಾಮಿರಾವ್ ಅವರಿಗೂ ಗೊತ್ತಿದೆ. ಆದ್ದರಿಂದ ಇದನ್ನು ಬುದ್ಧಿ ಪೂರಕವಾಗಿ ಡಿಸ್-ಕನೆಕ್ಟ್ ಮಾಡಿಲ್ಲ. ೭೧ ಕೋಟಿ ರೂಪಾಯಿ ಬಾಕಿ ಇರತಕ್ಕಂಥದ್ದು ಸರ್ಕಾರಿ ವಲಯದಲ್ಲಿರತಕ್ಕಂಥ ಕಾರ್ಖಾನೆ ಇದನ್ನು ಯಾರಿಗೇ ಆಗಲೀ ಮಾರಾಟ ಮಾಡುವ ಬಗ್ಗೆ ಅದನ್ನು ಸಂಪೂರ್ಣವಾಗಿ ನಿರಾಕರಿಸುತ್ತೇನೆ. ಅದನ್ನು ಮಾರಾಟ ಮಾಡುವುದಿಲ್ಲ. ಇನ್ನೊಂದು ವಿಷಯವನ್ನು ಹೇಳುವುದಾದರೆ ಕೇಂದ್ರ ಸರ್ಕಾರದ ಸಾರ್ವಜನಿಕ ಉದ್ದಿಮೆಯಾದ ಇದನ್ನು ಸ್ಟೀಲ್ ಅಥಾರಿಟಿ ಆಫ್ ಇಂಡಿಯಾ ಅವರಿಗೆ ವಹಿಸಿ ಕೊಡುವ ಬಗ್ಗೆ ಮಾತುಕತೆ ಅಂತಿಮ ಘಟ್ಟಕ್ಕೆ ಬಂದಿದೆ. ಸಧ್ಯದಲ್ಲಿಯೇ ಅದರ ಬಗ್ಗೆ ತೀರ್ಮಾನವಾಗುತ್ತದೆ.

ಎಂ. ಇ. ಐ. ಕೈಗಾರಿಕೆ ಬಗ್ಗೆ

೪೦೪೬. ಶ್ರೀ ಎಂ. ಎಸ್. ಕೃಷ್ಣನ್, (ರಾಜಾಜಿನಗರ).—ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನ ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಕೈಗಾರಿಕೆ ದಿನೇ ದಿನೇ ಕ್ಷೀಣಿಸುತ್ತಿರುವುದು ಮತ್ತು ಲಾಭದಾಯಕವಾಗಿ ನಡೆಯದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಪರಿಸ್ಥಿತಿಗೆ ಸಾಕಷ್ಟು ಸಾಮಂಗ್ರಿಗಳನ್ನು ಒದಗಿಸದಿರುವುದು, ಸರಿಯಾದ ಯೋಜನೆ ಇಲ್ಲದಿರುವುದು ಮತ್ತು ಸಾಕಷ್ಟು ಬಂಡವಾಳ ಸರ್ಕಾರವು ಕೊಡದಿರುವುದೇ ಕಾರಣಗಳು ಎಂಬುದನ್ನು ಸರ್ಕಾರವು ಮನಗಂಡಿದೆಯೇ ?

ಇ) ಈ ಕೈಗಾರಿಕೆಯನ್ನು ಲಾಭದಾಯಕವಾಗಿ ನಡೆಸಲು ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀ ಜೆ. ಹೆಚ್. ಪಟೇಲ್, (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ಹೌದು.

ಆ) ಹೌದು. ದುಡಿಯುವ ಬಂಡವಾಳದ ಕೊರತೆಯಿದೆ.

ಇ) ಕಾರ್ಖಾನೆಯ ಪುನರ್ ಸಜ್ಜೀಕರಣದ ಪ್ರಸ್ತಾವನೆಯು ಐ. ಡಿ. ಬಿ. ಐ. ಮತ್ತು ಬ್ಯಾಂಕುಗಳೊಡನೆ ಚರ್ಚಿಸುವ ಹಂತದಲ್ಲಿದ್ದು, ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರಲಾಗುವುದು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ಎರಡನೆಯಂ ಪ್ರಶ್ನೆಗೆ ಉತ್ತರ ಕೊಟ್ಟಿರುವುದರಲ್ಲಿ ದುಡಿಯುವ ಬಂಡವಾಳದ ಕೊರತೆಯಿದೆ ಎಂದು ಹೇಳಿದ್ದಾರೆ. ಬಂಡವಾಳದ ಕೊರತೆಯಿಂದ ಈ ಪರಿಸ್ಥಿತಿಯಾಗಿದೆ ಎಂದು ಹೇಳಿದ್ದೀರಿ. ಆದರೆ ಅಲ್ಲಿ ಇವತ್ತಿನ ದಿವಸ ಕಾಂಪೊನೆಂಟ್‌ಗಳನ್ನು ತಯಾರು ಮಾಡಬೇಕಾಗಿತ್ತು, ಇದೊಂದು. ಅಲ್ಲಿ ಕಾಂಪೊನೆಂಟ್ಸ್ ಕೂಡಾ ತಯಾರಾಗುತ್ತಿಲ್ಲ, ವರ್ಕರ್ಸ್ ಕೂಡಾ ಕೆಲಸವಿಲ್ಲದೆ ಸುಮ್ಮನೆ ಇದ್ದಾರೆ. ಎರಡನೆಯದು ನೀವು ಏನಂ ಇವತ್ತಿನದಿವಸ ಅಲ್ಲಿ ಒಂದು ಅಗ್ರಿಮೆಂಟನ್ನು ವಿದೇಶಿ ಕಂಪನಿ ಜೊತೆಯಲ್ಲಿ ಮಾಡಿಕೊಂಡಿದ್ದೀರಲ್ಲಾ ಅಂದರೆ ಐ ಜಿ ಎಂ. ಇ. ಐ, ಇ.ಐ.ಬಿ, ಬೆಲ್ಜಿಯಮ್-ಎಂ. ಇ. ಐ. ಇವುಗಳ ಜೊತೆಯಲ್ಲಿ ಒಪ್ಪಂದ ಆಗಿದ್ದರೆ ಇದು ಕಾರ್ಯಗತವಾಗಿಲ್ಲವೇ? ಇದಕ್ಕೆ ಮತ್ತೊಂದು ಕಾರಣವಲ್ಲವೆ? ಇವುಗಳ ರೂಪರೇಷೆಗಳೇನು? ಇವುಗಳು ಏನಾಗಿದೆ, ಏನು ಯೋಜನೆಮಾಡಿದ್ದೀರಿ ಎಂದು ತಾವು ಹೇಳುವುದಕ್ಕಾಗುತ್ತದೆಯೇ?

ಶ್ರೀ ಜೆ. ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈ ಕಾರ್ಖಾನೆಯು ಕಳೆದ ಎರಡು ವರ್ಷದ ಪರ್‌ಫಾರ್ಮೆನ್ಸ್ ರಿಪೋರ್ಟನ್ನು ನಾನು ಹೇಳಿದರೆ ಮಾನ್ಯ ಸದಸ್ಯರಿಗೆ ಬಹುಶಃ ಅವರ ಮನಸ್ಸಿಗೆ